BKI 3910/1516

ಈ ದಸ್ತಾವೇಜು..6.....ಪುಟನ್ನು ಒಳಗೊಂಡಿದೆ.

I ನೇ ಪುಸ್ತಕ 3910/1516 ನೇ ದಸ್ತಾವೇಜು 1 ನೇ ಪುಟ

## <u>ಪರಿತ್ಯಾಜನಾ ಪತ್ರ</u>

ಸನ್ ಎರಡು ಸಾವಿರದ ಹದಿನೈದನೇ ಇಸವಿ ಆಗಸ್ಟ್ ಮಾಹೆ ತಾರೀಖು 10th (10 –08–2015) ರಂದು, **<u>ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ</u>** ಇವರಿಗೆ ಕರ್ನಾಟಕ ಸರ್ಕಾರದ ಸನ್ಮಾನ್ಯ ರಾಜ್ಯಪಾಲರ ಆದೇಶಾನುಸಾರವಾಗಿ ಹಾಗೂ ಸರ್ಕಾರದ ಪರವಾಗಿ;

ಮೆ. ಬಿ.ಸಿ.ವಿ. ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಮೆ. ಸಿ. ವಿ. ಪ್ರಾಪರ್ಟೀಸ್ (ಬೆಂಗಳೂರು) ಪ್ರೈವೇಟ್ ಲಿಮಿಟೆಡ್, 29ನೇ ಮಹಡಿ, ವರ್ಲ್ಡ್ ಟ್ರೇಡ್ ಸೆಂಟರ್, ಬ್ರಿಗೇಡ್ ಗೇಟ್‌ವೇ ಕ್ಯಾಂಪಸ್, ನಂ. 26/1, ಡಾ||ರಾಜ್ ಕುಮಾರ್ ರಸ್ತೆ, ಮಲ್ಲೇಶ್ವರಂ – ರಾಜಾಜಿನಗರ, ಬೆಂಗಳೂರು – 560 055 ಇವರ ಪರವಾಗಿ ಅಧಿಕೃತ ಸಹಿದಾರರಾದ **ಅಮರ್ ಮೈಸೂರು** ಆದ ನಾನು ನೊಂದಾಯಿಸಿಕೊಟ್ಟ ಪರಿತ್ಯಾಜನಾ ಪತ್ರದ ಕ್ರಮವೇನೆಂದರೆ,

ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಬಳಿ, ರಾಯಸಂದ್ರ ಗ್ರಾಮದ ಸರ್ವೆ ನಂ. 41ರಲ್ಲಿನ **<u>ಒಟ್ಟು 16ಎಕರೆ 39ಗುಂಟೆ</u>** ವಿಸ್ತೀರ್ಣದ ಜಮೀನಿನಲ್ಲಿ ಪ್ರಸ್ತಾವಿತ ಸಮೂಹ ವಸತಿ ಬಡಾವಣೆ ಅಭಿವೃದ್ಧಿ ನಕ್ಷೆಗೆ ಅನುಮೋದನೆ ನೀಡಲು ವಸತಿ, ಸಂದರ್ಶಕರ ವಾಹನ ನಿಲ್ದಾಣ, ಒಳ ಸಂಪರ್ಕ ಪ್ರದೇಶ ಮತ್ತು ಸೇವಾ ಪ್ರದೇಶ (ಸರ್ವಿಸ್ ಏರಿಯಾ)ಇವುಗಳಿಗೆ ಮೀಸಲಿಟ್ಟಿರುವ ಪ್ರದೇಶವನ್ನು ಹೊರತುಪಡಿಸಿ, ಉಳಿದ ನಾಗರೀಕ ಸೌಲಭ್ಯ(ಸಿ.ಎ), ಉದ್ಯಾನವನ ಹಾಗೂ ಬಯಲು ಪ್ರದೇಶಕ್ಕಾಗಿ ಕಾಯ್ದಿರಿಸಿದ ಜಾಗಗಳನ್ನು ನೋಂದಾಯಿಸಿ ಕೊಡಬೇಕೆಂದು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದಲ್ಲಿ ದಿನಾಂಕ: 18–12–2014 ರಂದು ನಡೆದ 102ನೇ ಸಭೆಯ ವಿಷಯ ಸಂಖ್ಯೆ: 102[7(1)] ರಲ್ಲಿನ ನಿರ್ಣಯದಂತೆ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಪತ್ರ ಸಂಖ್ಯೆ ಬಿಐಎಎಪಿಎ/ಟಿಪಿ02/ಡಿಪಿ/33/2014–15 ಆದೇಶ ನೀಡಿರುವುದರಿಂದ ಈ ಕೆಳಕಂಡ ಪರಿತ್ಯಾಜನಾ ಪತ್ರವನ್ನು ನಾವು ನೊಂದಾಯಿಸಿ ಕೊಟ್ಟಿರುತ್ತೇನೆ.

ತಮ್ಮ ಕಛೇರಿಯ ನಿಬಂಧನೆಯಂತೆ, ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಬಳಿ, ರಾಯಸಂದ್ರ ಗ್ರಾಮದ ಸರ್ವೆ ನಂ. 41ರಲ್ಲಿನ **<u>ಒಟ್ಟು 16ಎಕರೆ 39ಗುಂಟೆ</u>** ವಿಸ್ತೀರ್ಣದ ಜಮೀನಿನಲ್ಲಿ ಪ್ರಸ್ತಾವಿತ ಸಮೂಹ ವಸತಿ ಬಡಾವಣೆ ಅಭಿವೃದ್ಧಿ ನಕ್ಷೆಗೆ ಅನುಮೋದನೆ ನೀಡಲು ವಸತಿ, ಸಂದರ್ಶಕರ ವಾಹನ ನಿಲ್ದಾಣ, ಒಳ ಸಂಪರ್ಕ ಪ್ರದೇಶ ಮತ್ತು ಸೇವಾ ಪ್ರದೇಶ (ಸರ್ವಿಸ್ ಏರಿಯಾ)ಇವುಗಳಿಗೆ ಮೀಸಲಿಟ್ಟಿರುವ ಪ್ರದೇಶವನ್ನು ಹೊರತುಪಡಿಸಿ, ಉಳಿದ ನಾಗರೀಕ ಸೌಲಭ್ಯ(ಸಿ.ಎ), ಉದ್ಯಾನವನ ಹಾಗೂ ಬಯಲು ಪ್ರದೇಶಕ್ಕಾಗಿ ಕಾಯ್ದಿರಿಸಿದ ಈ ಕೆಳಕಂಡ ಪ್ರದೇಶಗಳನ್ನು ತಮ್ಮ ಕಛೇರಿಗೆ ಈ ಪರಿತ್ಯಾಜನಾ ಪತ್ರದ ಮೂಲಕ ನೋಂದಣಿ ಮಾಡಿಕೊಟ್ಟಿರುತ್ತೇನೆ.

For BCV Developers Pvt. Ltd.
Authorised Signatory

For CV Properties (Bangalore) Private Limited
Authorised Signatory

ಸದಸ್ಯ ಕಾರ್ಯದರ್ಶಿ
ಬೆ.ಅ.ರಾ.ವಿ.ನಿ.ಪ್ರ.ಯೋ.ಪ್ರಾ.

Print Date & Time : 10-08-2015 03:58:01 PM

3910/15-16

I ಪುಸ್ತಕ ... 2 ದಸ್ತಾವೇಜು

ದಸ್ತಾವೇಜು ಸಂಖ್ಯೆ : 3910

ಸಬ್ ರಜಿಸ್ಟ್ರಾರ ದೇವನಹಳ್ಳಿ ರವರ ಕಚೇರಿಯಲ್ಲಿ ದಿನಾಂಕ 10-08-2015 ರಂದು 03:23:10 PM ಗಂಟೆಗೆ ಈ ಕೆಳಗೆ ವಿವರಿಸಿದ ಶುಲ್ಕದೊಂದಿಗೆ

| ಕ್ರಮ ಸಂಖ್ಯೆ | ವಿವರ | ರೂ. ಪೈ |
|---|---|---|
| 1 | ಸ್ಕ್ಯಾನಿಂಗ್ ಫೀ | 245.00 |
| 2 | ಪರಿಶೋಧನಾ ಶುಲ್ಕ | 35.00 |
| | ಒಟ್ಟು : | 280.00 |

ಶ್ರೀ ಮೆ: ಬಿ.ಸಿ.ವಿ. ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ & ಸಿ.ವಿ. ಪ್ರಾಪರ್ಟೀಸ್ (ಬೆಂಗಳೂರು) ಪ್ರೈವೇಟ್ ಲಿ., ಪರವಾಗಿ ಅಧಿಕೃತ ಸಹಿದಾರರಾದ ಅಮರ್ ಮೈಸೂರು ಇವರಿಂದ ಹಾಜರ ಮಾಡಲ್ಪಟ್ಟಿದೆ

| ಹೆಸರು | ಫೋಟೋ | ಹೆಬ್ಬೆಟ್ಟಿನ ಗುರುತು | ಸಹಿ |
|---|---|---|---|
| ಶ್ರೀ ಮೆ: ಬಿ.ಸಿ.ವಿ. ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ & ಸಿ.ವಿ. ಪ್ರಾಪರ್ಟೀಸ್ (ಬೆಂಗಳೂರು) ಪ್ರೈವೇಟ್ ಲಿ., ಪರವಾಗಿ ಅಧಿಕೃತ ಸಹಿದಾರರಾದ ಅಮರ್ ಮೈಸೂರು |  |  | For BCV Developers Pvt. Ltd. Amar AUTHORISED SIGNATORY |

ಸಬ್ ರಜಿಸ್ಟ್ರಾರ

ಉಪನೋಂದಣಾಧಿಕಾರಿ

ಬರೆದುಕೊಟ್ಟಿದ್ದಾಗಿ(ಮತ್ತು ಪೂರ್ಣ/ಭಾಗಶಃ ಪ್ರತಿಫಲ ರೂ.................. (ರೂಪಾಯಿ........................................................................................ಮುಟ್ಟಿದ್ದಾಗಿ) ಒಪ್ಪಿರುತ್ತಾರೆ

| ಕ್ರಮ ಸಂಖ್ಯೆ | ಹೆಸರು | ಫೋಟೋ | ಹೆಬ್ಬೆಟ್ಟಿನ ಗುರುತು | ಸಹಿ |
|---|---|---|---|---|
| 1 | ಮೆ: ಬಿ.ಸಿ.ವಿ. ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ & ಸಿ.ವಿ. ಪ್ರಾಪರ್ಟೀಸ್ (ಬೆಂಗಳೂರು) ಪ್ರೈವೇಟ್ ಲಿ., ಪರವಾಗಿ ಅಧಿಕೃತ ಸಹಿದಾರರಾದ ಅಮರ್ ಮೈಸೂರು. (ಬರೆದುಕೊಡುವವರು) |  |  | For CV Properties (Bangalore) Private L Amar Authorised Signatory |

ಸಬ್ ರಜಿಸ್ಟ್ರಾರ

ಉಪನೋಂದಣಾಧಿಕಾರಿ

ರಜಿಸ್ಟ್ರೇಷನ್ ಕಾಯ್ದೆ ಕಲಂ 88(i) ಪ್ರಕಾರ ಹಾಜರಾಗಲು ವಿನಾಯ್ತಿಯಿರುವ ಕರ್ನಾಟಕ ಸರ್ಕಾರದ ಸನ್ಮಾನ್ಯ ರಾಜ್ಯಪಾಲರ ಆದೇಶಾನುಸಾರವಾಗಿ ಹಾಗೂ ಸರ್ಕಾರದ ಪರವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ದೇವನಹಳ್ಳಿ. ಇವರು ದಸ್ತಾವೇಜನ್ನು ಬರೆದುಕೊಟ್ಟಿರುವಿದನ್ನು ನಾನು ಒಪ್ಪಿರುತ್ತೇನೆ.

ಉಪನೋಂದಣಾಧಿಕಾರಿ

ಸದರಿ ಅಭಿವೃದ್ಧಿ ನಕ್ಷೆಯಲ್ಲಿ ನಮೂದಿಸಿರುವಂತೆ, ವಸತಿ, ಸಂದರ್ಶಕರ ವಾಹನ ನಿಲ್ದಾಣ, ಒಳ ಸಂಪರ್ಕ ಪ್ರದೇಶ ಮತ್ತು ಸೇವಾ ಪ್ರದೇಶ (ಸರ್ವಿಸ್ ಏರಿಯಾ), ನಾಗರೀಕ ಸೌಲಭ್ಯ(ಸಿ.ಎ), ಉದ್ಯಾನವನ ಹಾಗೂ ಬಯಲುಜಾಗ ಉದ್ದೇಶಕ್ಕಾಗಿ ಕಾಯ್ದಿರಿಸಿರುವ ಜಾಗದ ವಿಸ್ತೀರ್ಣವು ಈ ಕೆಳಕಂಡಂತೆ ಇರುತ್ತದೆ.

**ಭೂ ಉಪಯೋಗದ ವಿಶ್ಲೇಷಣೆ**

| ಕ್ರಮ ಸಂಖ್ಯೆ | ವಿವರಣೆ | ವಿಸ್ತೀರ್ಣ ಚದರ ಮೀಟರ್‌ಗಳಲ್ಲಿ | ವಿಸ್ತೀರ್ಣ ಗುಂಟೆಗಳಲ್ಲಿ |
|---|---|---|---|
| 1 | ವಸತಿ ಪ್ರದೇಶ | 12475.30 | 18.16 |
| 2 | ಸೇವಾ ಪ್ರದೇಶ (ಸರ್ವಿಸ್ ಏರಿಯಾ) | 468.00 | 0.68 |
| 3 | ಉದ್ಯಾನವನ ಮತ್ತು ಬಯಲು ಜಾಗ | 13748.00 | 20.01 |
| 4 | ನಾಗರೀಕ ಸೌಲಭ್ಯ ಪ್ರದೇಶ | 3441.65 | 5.01 |
| 5 | ಸಂದರ್ಶಕರ ವಾಹನ ನಿಲ್ದಾಣ | 3435.97 | 5.00 |
| 6 | ಒಳ ಸಂಪರ್ಕ ಪ್ರದೇಶ ಮತ್ತು ಉಳಿಕೆ ಜಾಗ | 35126.53 | 51.14 |
| | ಒಟ್ಟು ವಿಸ್ತೀರ್ಣ | 68695.45 | 100.00 |

ಸದರಿ ಸಮೂಹ ವಸತಿ ಬಡಾವಣೆ ನಕ್ಷೆಯಲ್ಲಿ ಕಾಣಿಸಿರುವಂತೆ ಉದ್ಯಾನವನ ಮತ್ತು ಬಯಲು ಜಾಗ ಮತ್ತು ನಾಗರಿಕ ಸೌಲಭ್ಯ ಪ್ರದೇಶಗಳನ್ನು ಮುಫತ್ತಾಗಿ ರಾಜ್ಯಪಾಲರ ಪರವಾಗಿ ತಮ್ಮ ಪ್ರಾಧಿಕಾರಕ್ಕೆ ನೊಂದಣಿ ಮಾಡಿಕೊಟ್ಟಿರುತ್ತೇವೆ ಎಂಬುದಾಗಿ ನನ್ನ ಆತ್ಮಸಂತೋಷದಿಂದಲೂ ಹಾಗೂ ಖುದ್ದು ಮನೋರಾಜಿಯಿಂದಲೂ ಒಪ್ಪಿ ಬರೆಸಿಕೊಟ್ಟ ಪರಿಷ್ಕೃತ ಪರಿತ್ಯಾಜ್ಯನಾ ಪತ್ರ.

ಅನುಮೋದಿತ ಸದರಿ ವಿನ್ಯಾಸ ನಕ್ಷೆಯ 68695.45 ಚದರ ಮೀಟರ್ ವಿಸ್ತೀರ್ಣದಲ್ಲಿ, ವಸತಿ, ಸೇವಾ ಪ್ರದೇಶ (ಸರ್ವಿಸ್ ಏರಿಯಾ), ಸಂದರ್ಶಕರ ವಾಹನ ನಿಲ್ದಾಣ, ಒಳ ಸಂಪರ್ಕ ಪ್ರದೇಶ ಮತ್ತು ಉಳಿಕೆ ಜಾಗ ಇವುಗಳಿಗೆ ಕಾಯ್ದಿರಿಸಿರುವ ಪ್ರದೇಶವನ್ನು ಹೊರತುಪಡಿಸಿ ಉಳಿದ ಉದ್ಯಾನವನ ಮತ್ತು ನಾಗರೀಕ ಸೌಲಭ್ಯ (ಸಿ.ಎ.)ಕ್ಕಾಗಿ ಕಾಯ್ದಿರಿಸಿರುವ ಪ್ರದೇಶಗಳು ಈ ಕೆಳಕಂಡಂತಿರುತ್ತವೆ.

For BCV Developers Pvt. Ltd.

AUTHORISED SIGNATORY

For CV Properties (Bangalore) Private Limited

Authorised Signatory

ಸದಸ್ಯ ಕಾರ್ಯದರ್ಶಿ
ಬೆ.ಅ.ರಾ.ಪ್ರಾ.ಪ್ರ.ಯೋ.ಪ್ರಾ.

ಗುರುತಿಸುವವರು

| ಕ್ರಮ ಸಂಖ್ಯೆ | ಹೆಸರು ಮತ್ತು ವಿಳಾಸ | ಸಹಿ |
|---|---|---|
| 1 | ಅಭಿನಯ್<br>29 ನೇ ಮಹಡಿ, ವರ್ಡ್ ಟ್ರೇಡ್ ಸೆಂಟರ್, ಡಾ. ರಾಜ್‌ಕುಮಾರ್ ರಸ್ತೆ, ಬೆಂಗಳೂರು. | |
| 2 | ಎಂ.ಎನ್. ಮಂಜುನಾಥ<br>30 ನೇ ಮಹಡಿ, ವರ್ಡ್ ಟ್ರೇಡ್ ಸೆಂಟರ್, ಡಾ. ರಾಜ್‌ಕುಮಾರ್ ರಸ್ತೆ, ಬೆಂಗಳೂರು. | |

ಸಬ್ ರಜಿಸ್ಟ್ರಾರ

ಉಪನೋಂದಣಾಧಿಕಾರಿ

1 ನೇ ಪುಸ್ತಕದ ದಸ್ತಾವೇಜು

ನಂಬರ DNH-1-03910-2015-16 ಆಗಿ

ಸಿ.ಡಿ. ನಂಬರ DNHD554 ನೇ ದ್ದರಲ್ಲಿ

ದಿನಾಂಕ 10-08-2015 ರಂದು ನೋಂದಾಯಿಸಲಾಗಿದೆ

ಸಬ್ ರಜಿಸ್ಟ್ರಾರ (ದೇವನಹಳ್ಳಿ )

ಶ್ರೀನಾಥ್. ಎಸ್.ಆರ್.
ಉಪನೋಂದಣಾಧಿಕಾರಿ
ದೇವನಹಳ್ಳಿ

Designed and Developed by C-DAC, ACTS, Pune

ಸ್ವತ್ತಿನ ವಿವರ

ಉದ್ಯಾನವನಕ್ಕಾಗಿ ಕಾಯ್ದಿರಿಸಿದ ಪ್ರದೇಶ

**ಉದ್ಯಾನವನ ಸಂಖ್ಯೆ– 1:**

ಅನುಮೋದಿತ ನಕ್ಷೆಯಂತೆ ವಿಸ್ತೀರ್ಣ 10462.00 (ಹತ್ತು ಸಾವಿರದ ನಾಲ್ಕು ನೂರ ಅರವತ್ತೆರಡು) ಚದರ ಮೀಟರ್ ಜಾಗಕ್ಕೆ ಚಕ್ಕುಬಂದಿ: –

ಪೂರ್ವಕ್ಕೆ : ಸರ್ವೆ ನಂ. 42 ರ ಪ್ರದೇಶ
ಪಶ್ಚಿಮಕ್ಕೆ : ನಾಗರೀಕ ಸೌಲಭ್ಯ ಪ್ರದೇಶ ಮತ್ತು ಒಳ ಸಂಪರ್ಕ ರಸ್ತೆ
ಉತ್ತರಕ್ಕೆ : ಒಳ ಸಂಪರ್ಕ ರಸ್ತೆ
ದಕ್ಷಿಣಕ್ಕೆ : ಸರ್ವೆ ನಂ. 16 ರ ಜಮೀನು ಮತ್ತು ನಾಗರೀಕ ಸೌಲಭ್ಯದ ಪ್ರದೇಶ

**ಉದ್ಯಾನವನ ಸಂಖ್ಯೆ– 2:**

ಅನುಮೋದಿತ ನಕ್ಷೆಯಂತೆ ವಿಸ್ತೀರ್ಣ 3286.00 (ಮೂರು ಸಾವಿರದ ಎರಡು ನೂರ ಎಂಬತ್ತಾರು ಪಾಯಿಂಟ್ ಸೊನ್ನೆ ಸೊನ್ನೆ) ಚದರ ಮೀಟರ್ ಜಾಗಕ್ಕೆ ಚಕ್ಕುಬಂದಿ: –

ಪೂರ್ವಕ್ಕೆ : ಬಯಲುಜಾಗ ನಂತರ ಒಳ ಸಂಪರ್ಕ ರಸ್ತೆ
ಪಶ್ಚಿಮಕ್ಕೆ : ಸರ್ವೆ ನಂ. 35 ರ ಜಮೀನು
ಉತ್ತರ : ಒಳ ಸಂಪರ್ಕ ರಸ್ತೆ
ದಕ್ಷಿಣಕ್ಕೆ : ಒಳ ಸಂಪರ್ಕ ರಸ್ತೆ

**ನಾಗರೀಕ ಸೌಲಭ್ಯದ ಪ್ರದೇಶ**

ಅನುಮೋದಿತ ನಕ್ಷೆಯಂತೆ ವಿಸ್ತೀರ್ಣ 3441.65 (ಮೂರು ಸಾವಿರದ ನಾಲ್ಕು ನೂರ ನಲವತ್ತೊಂದು ಪಾಯಿಂಟ್ ಆರು ಐದು) ಚದರ ಮೀಟರ್ ಜಾಗಕ್ಕೆ ಚಕ್ಕುಬಂದಿ: –

ಪೂರ್ವಕ್ಕೆ : ಉದ್ಯಾನವನ ಬಯಲು ಜಾಗೆ
ಪಶ್ಚಿಮಕ್ಕೆ : ಒಳ ಸಂಪರ್ಕ ರಸ್ತೆ
ಉತ್ತರಕ್ಕೆ : ಉದ್ಯಾನವನ ಬಯಲು ಜಾಗೆ ಮತ್ತು ಒಳ ಸಂಪರ್ಕ ರಸ್ತೆ
ದಕ್ಷಿಣಕ್ಕೆ : ಸಂದರ್ಶಕರ ವಾಹನ ನಿಲುಗಡೆ ಪ್ರದೇಶ

For BCV Developers Pvt. Ltd.
AUTHORISED SIGNATORY

For CV Properties (Bangalore) Private Limited
Authorised Signatory

ಸದಸ್ಯ ಕಾರ್ಯದರ್ಶಿ
ಬೆ.ಅ.ರಾ.ವಿ.ವಿ.ಪ್ರ.ಯೋ.ಪ್ರಾ.

ಮೇಲ್ಕಂಡಂತೆ ಸದರಿ ಸಮೂಹ ವಸತಿ ಬಡಾವಣೆ ಅಭಿವೃದ್ಧಿ ನಕ್ಷೆಯಲ್ಲಿ ಉದ್ಯಾನವನ ಮತ್ತು ಬಯಲು ಪ್ರದೇಶಕ್ಕಾಗಿ ಕಾಯ್ದಿರಿಸಿದ 13748.00 ಚದರಮೀಟರ್ ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ 3441.65 ಚದರಮೀಟರ್ ಸೇರಿದಂತೆ ಒಟ್ಟು 17189.65 **ಚದರಮೀಟರ್** ಪ್ರದೇಶವನ್ನು ಮುಫತ್ತಾಗಿ ಸನ್ಮಾನ್ಯ ರಾಜ್ಯಪಾಲರ ಪರವಾಗಿ ತಮ್ಮ ಪ್ರಾಧಿಕಾರಕ್ಕೆ ನೊಂದಾವಣೆ ಮಾಡಿಕೊಟ್ಟಿರುತ್ತೇನೆ ಎಂಬುದಾಗಿ ಒಪ್ಪಿ ಬರೆಸಿಕೊಟ್ಟ ಪರಿತ್ಯಾಜನಾ ಪತ್ರ.

ಈ ಮೇಲ್ಕಂಡ ಉದ್ಯಾನವನ ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಪ್ರದೇಶವು ಈ ಪರಿತ್ಯಜನಾ ಪತ್ರಕ್ಕೆ ಒಳಪಟ್ಟಿರುತ್ತದೆ. ಇದರ ಖರ್ಚು ವೆಚ್ಚಗಳು ಸರ್ಕಾರಕ್ಕೆ ಸೇರಿರುತ್ತದೆ. ಸದರಿ ಪರಿತ್ಯಜನಾ ಪತ್ರಕ್ಕೆ ಭರಿಸಬೇಕಾದ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕವನ್ನು ಸರ್ಕಾರವೇ ಭರಿಸಬೇಕಾದುದರಿಂದ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕಕ್ಕೆ ವಿನಾಯ್ತಿ ಇರುತ್ತದೆ.

**ಸಾಕ್ಷಿದಾರರು :**

1) ABHINAY THIMMAIAH
29th Floor, WTC,
Dr. Rajkumar Road,
Bangalore

2) M.N. MANJUNATHA
30th Floor, WTC
Dr. Rajkumar Road
Bangalore-55.

**ಬರೆದುಕೊಡುವವರು**

(ಅಮರ್ ಮೈಸೂರು)
ಅಧಿಕೃತ ಸಹಿದಾರರು
ಮೆ. ಬಿ.ಸಿ.ವಿ. ಡೆವಲಪರ್ಸ್ ಪ್ರೈವೇಟ್ ಲಿ., ಮತ್ತು
ಮೆ. ಸಿ.ವಿ. ಪ್ರಾಪರ್ಟೀಸ್ (ಬೆಂಗಳೂರು) ಪ್ರೈವೇಟ್ ಲಿಮಿಟೆಡ್
ಇವರ ಪರವಾಗಿ,

ಸದಸ್ಯ ಕಾರ್ಯದರ್ಶಿ
ಬೆ.ಅ.ರಾ.ವಿ.ನಿ.ಪ್ರ.ಯೋ.ಪ್ರಾ.